ದಿನಾಂಕ**: 16.07.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು  ಪ್ರತಿವಾದಿ ಪರ ಶ್ರೀ ಜಿ ಎನ್ ಎನ್ ವಕೀಲರಿಂದಃ-

ಈ ದಾವೆಯನ್ನು ವಾದಿಯು ಪ್ರತಿವಾದಿಗಳ ವಿರುದ್ಧ ವಿಭಾಗ ಕೋರಿ ಸಲ್ಲಿಸಿರುತ್ತಾರೆ. ನನ್ನ ತಂದೆ ಒಟ್ಟು 4 ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸ.ನಂ.40 ರಲ್ಲಿ 1 ಎಕರೆ 22 ವರೆ ಗುಂಟೆ ಆಸ್ತಿಯು ನಮ್ಮ ತಾತನ ಸ್ವತ್ತಾಗಿರುತ್ತದೆ. ಸ.ನಂ.42 ರಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇವೆ. ಸದರಿ ಮನೆಯನ್ನು ಪ್ರತಿವಾದಿಗಳ ಸಹಾಯದಿಂದ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ.5/5 ರಲ್ಲಿ 1 ಎಕರೆ 35 ಗುಂಟೆಯ ಪೈಕಿ 21 ಗುಂಟೆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯೂ ಅದು ನನ್ನ ತಾಯಿಯ ಹೆಸರಿನಲ್ಲಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸ.ನಂ.5/5 ರಲ್ಲಿ 21 ಗುಂಟೆ ಆಸ್ತಿ ನನ್ನ ತಾಯಿಗೆ ಯಾವಾಗ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಒಟ್ಟು ಕುಟುಂಬದಲ್ಲಿ ಇರುವಾಗಲೇ ಅಡಮಾನ ಮಾಡಿರುತ್ತಾರೆ ಎಂದರೆ ಸರಿ. ಅದನ್ನು ಬಿಡಿಸಿಕೊಳ್ಳುವುದಕೋಸ್ಕರ ಪ್ರತಿವಾದಿಗಳು ಸೇರಿ ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ** ಪ್ರತಿವಾದಿ **ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ** ಪಾಟೀ ಸವಾಲಿಗೆ **ಕಾಲಾವಕಾಶ ನೀಡಲಾಯಿತು.)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು  ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.